# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ಎಸ್.ಸಿ. ಸಂಖ್ಯೆಃ 173/2019</u>

ಅ.ಸಾ. 01

ದೊ.ಸಾ. 02

| | |
|---|---|
| ಸಾಕ್ಷಿಯ ಹೆಸರು | ಃ ಜೈಲಾನಿ ಖಾಜಿ |
| ತಂದೆ ಹೆಸರು | ಃ ಮಹ್ಮದಅಲಿ |
| ವಯಸ್ಸು | ಃ 25 ವರ್ಷ |
| ಉದ್ಯೋಗ | ಃ ವಿದ್ಯಾರ್ಥಿ |
| ವಾಸಸ್ಥಳ | ಃ ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ 03/03/2021 |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ</u>**

ಮೃತ ನಾಗರಾಜ ನನ್ನ ಸ್ನೇಹಿತ. ಆತ ಕಾಣೆಯಾದ ಬಗ್ಗೆ ಚಾಸಾ.1 ಪೊಲೀಸರಿಗೆ ದೂರು ಕೊಟ್ಟಿದ್ದ. ನಾಗರಾಜನ ಶವ ಕರ್ನಾಟಕ ಯುನಿವರ್ಸಿಟಿಯ ಆವರಣದಲ್ಲಿರುವ ಲೇಡೀಜ್ ಹಾಸ್ಟೇಲ್ ಹತ್ತಿರ ಇರುವ ನೀಲಗಿರಿ ತೋಪಿನಲ್ಲಿ ಸುಮಾರು ಒಂದು ವರ್ಷದ ಹಿಂದೆ ಸಿಕ್ಕಿದೆ. ಶವ ಸಿಕ್ಕಾಗ ರಾತ್ರಿ ಸುಮಾರು 10.00 ಗಂಟೆ ಸಮಯವಾಗಿತ್ತು. ಶವವನ್ನು ಧಾರವಾಡ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ತೆಗೆದುಕೊಂಡು ಹೋಗಲಾಯಿತು. ಶವವನ್ನು ಗುರ್ತಿಸಲು ನನ್ನನ್ನು ಪೊಲೀಸರು ಕರೆಸಿದ್ದರು. ಮಾಲತೇಶ ಬೇವಿನಕೊಪ್ಪ ನನ್ನ ಸ್ನೇಹಿತ. ಆತನೂ ಶವವನ್ನು ಗುರ್ತಿಸುವ ಸಮಯದಲ್ಲಿ ಬಂದಿದ್ದ.

2. ಶವವನ್ನು ನೋಡಿದಾಗ ತಲೆಗೆ ಪೆಟ್ಟಾಗಿದ್ದು, ಮೈಮೇಲೆ ಹುಳುಗಳಾಗಿದ್ದು, ದುರ್ವಾಸನೆ ಬರುತ್ತಿತ್ತು. ಶವದ ಮೈಮೇಲೆ ನೀಲಿ ಜೀನ್ಸ ಪ್ಯಾಂಟ್, ಆಕಾಶ ನೀಲಿ ಶರ್ಟ್ ಇತ್ತು. ಬಿಳಿಯ ಬಣ್ಣದ ಶೂಸ್ ಹಾಕಿಕೊಂಡಿದ್ದ. ಆತನ ಜೇಬಿನಲ್ಲಿ ಪರ್ಸ ಮತ್ತು ಮೊಬೈಲ್ ಫೋನ್ ಇತ್ತು. ಅವುಗಳನ್ನು ಗುರ್ತಿಸಿದ ನಂತರ ಪೊಲೀಸರು ತಮ್ಮ ತಾಬಾಕ್ಕೆ ತೆಗೆದುಕೊಂಡರು.

3. ಪೊಲೀಸರು ಪಂಚನಾಮೆಯನ್ನು ಬರೆದಿದ್ದು, ಅದಕ್ಕೆ ನನ್ನ ಸಹಿಯನ್ನು ಪಡೆದಿದ್ದಾರೆ. ಪೊಲೀಸರು ಪಂಚನಾಮೆ ಮಾಡಿದಾಗ ರಾತ್ರಿ 12.00 ಗಂಟೆಯಾಗಿತ್ತು. ಪಂಚನಾಮೆ ಮಾಡಲು ಸುಮಾರು ಒಂದು ಗಂಟೆ ಸಮಯ ಬೇಕಾಯಿತು. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೇನೆ. ನನ್ನ ಸಹಿಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಮಹಜರನ್ನು ನೋಡುತ್ತಿದ್ದು, ಅದಕ್ಕೆ ನಿಪಿ.1 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ. 1(ಎ)ಎಂದು ಗುರ್ತಿಸಲಾಯಿತು.

4. ಮೊಬೈಲ್ ಫೋನ್ ಮತ್ತು ಪರ್ಸನ್ನು ನೋಡಿದಲ್ಲಿ ಗುರ್ತಿಸುತ್ತೇನೆ. (ಮೊಬೈಲ್ ಫೋನನ್ನು ಖಾಕಿ ಬಣ್ಣದ ಪೇಪರಿನಲ್ಲಿ ಸುತ್ತಿ ದಾರವನ್ನು ಕಟ್ಟಿ, ಅದರ ಮೇಲೆ ಎಫ್.ಎಸ್.ಎಲ್., ನ ಮೊಹರು ಹಾಕಲಾಗಿದ್ದು, ಪರ್ಸನ್ನು ಸಹ ಅದೇ ರೀತಿ ಬ್ರೌನ್ ಪೇಪರಿನಲ್ಲಿ ಸುತ್ತಿ ದಾರವನ್ನು ಕಟ್ಟಿ ಎಫ್.ಎಸ್.ಎಲ್., ನ ಮೊಹರು ಹಾಕಲಾಗಿದ್ದು, ಸಾಕ್ಷಿಯಿಂದ ಗುರ್ತಿಸಿಕೊಳ್ಳಲು ಅಭಿಯೋಜಕರು ತೆರೆಯಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು). ಅದನ್ನು ತೆಗೆದು ನೋಡಿದಾಗ, ಅದರೊಳಗೆ ಸ್ಮಾರ್ಟ್ ಫೋನ್ ಇದ್ದು, ಅದರ ಹಿಂದೆ ಸಿಲ್ವರ್ ಬಣ್ಣ ಇರುತ್ತದೆ. ಅದಕ್ಕೆ ಮುಮಾ.1 ಎಂದು ಗುರ್ತಿಸಲಾಯಿತು. ಇನ್ನೊಂದು ಪ್ಯಾಕಿನಲ್ಲಿ ಲೇಥರ್ ಪರ್ಸ ಇದ್ದು, ಅದರೊಳಗೆ ಮತದಾರರ ಗುರುತಿನ ಚೀಟಿ, ಐಡಿಬಿಐ., ಬ್ಯಾಂಕಿನ ಡೆಬಿಟ್ ಕಾರ್ಡ, ಪಾನ್ ಕಾರ್ಡ, ವಾಹನದ ನೊಂದಣಿ ಪತ್ರದ ಸ್ಮಾರ್ಟ್ ಕಾರ್ಡ ಮತ್ತು ಪಾಸ್ ಪೋರ್ಟ್ ಸೈಜಿನ ಆರು ಭಾವಚಿತ್ರಗಳು ಇರುತ್ತವೆ. ಸದರಿ ಭಾವಚಿತ್ರಗಳು ಮೃತನ ಭಾವಚಿತ್ರಗಳು ಎಂದು ಸಾಕ್ಷಿ ಗುರ್ತಿಸಿದ್ದಾರೆ. ಲೇಥರ್ ಪರ್ಸಗೆ ಮುಮಾ.2 ಎಂದು ಗುರ್ತಿಸಲಾಯಿತು. ಅದರೊಳಗೆ ಇರುವ ಮತದಾರರ ಗುರುತಿನ ಚೀಟಿಗೆ ನಿಪಿ.2 ಎಂದು, ಐಡಿಬಿಐ., ಬ್ಯಾಂಕಿನ ಡೆಬಿಟ್ ಕಾರ್ಡಗೆ ನಿಪಿ.3 ಎಂದು, ಪಾನ್ ಕಾರ್ಡಗೆ ನಿಪಿ.4 ಎಂದು, ವಾಹನದ ನೊಂದಣಿ ಪತ್ರದ ಸ್ಮಾರ್ಟ್ ಕಾರ್ಡಗೆ ನಿಪಿ.5 ಎಂದು ಮತ್ತು ಪಾಸ್ ಪೋರ್ಟ್ ಸೈಜಿನ ಆರು ಭಾವಚಿತ್ರಗಳಿಗೆ ಸೇರಿ ನಿಪಿ.6 ಎಂದು ಗುರ್ತಿಸಲಾಯಿತು.

5. ಪಂಚನಾಮೆ ಕಾಲಕ್ಕೆ ಪೋಟೋ ತೆಗೆಯಲಾಗಿದೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿಪಿ.7 ಎಂದು ಗುರ್ತಿಸಲಾಯಿತು. ಸದರಿ ಪೋಟೋದಲ್ಲಿ ನನ್ನ, ಇನ್ನೊಬ್ಬ ಪಂಚ ಮತ್ತು ಪೊಲೀಸರ ಪೋಟೋಗಳು ಇವೆ. ಅದರಲ್ಲಿ ಮೃತನ ಶವದ ಪೋಟೋ ಸಹ ಇದೆ.

**<u>ಪಾಟೀಸವಾಲು 1 ಮತ್ತು 3 ನೇ ಆರೋಪಿಗಳ ಪರ ಶ್ರೀ ಪಿ ಹೆಚ್ ಹೆಚ್ ವಕೀಲರಿಂದಃ</u>**

ವಕೀಲರು ಸಮಯ ಕೋರುತ್ತಾರೆ. ಕಾರಣ ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

03/03/2021

(**ಉಮೇಶ ಎಂ ಅಡಿಗ**)
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.